## ಕೋಣ... ನೋಡ್ರಿ...



ಮಹಾರಾಷ್ಟ್ರ ಮೂಲದ ವಿಭಾ ಕನ್ನಡದ ಶೀನಿ ಕೈ ಹಿಡಿದು ಐದಾರು ತಿಂಗಳಾಗಿತ್ತು. ಪತಿಯ ಸಹಕಾರದಿಂದ ಕನ್ನಡ ಕಲಿಯಲು ಆರಂಭಿಸಿದ್ದಳು. ಒಂದು ಸಂಜೆ ಮನೆಯ ಗೇಟಿನೆದುರು ಅಪರಿಚಿತ ವ್ಯಕ್ತಿ ಬಂದಿರುವುದನ್ನು ಅಡುಗೆ ಮನೆಯ ಕಿಟಕಿಯಿಂದ ಗಮನಿಸಿದವಳು, 'ರೀ... ಗೇಟಿನ ಬಳ್ಳೆ ಕೋಣ... ನೋಡ್ರೀ...' ಎಂದು ಕೂಗಿದಳು. ರೂಮಿನೊಳಗಿದ್ದ ಶೀನಿ ಗಾಬರಿಗೊಂಡು ಅಲ್ಲಿಂದಲೇ ಏರು ಸ್ವರದಲ್ಲಿ, 'ಹ್ಯಾ... ಹ್ಯಾ... ಹ್ಹೊ...' ಎಂದು ಕಿರುಚುತ್ತ ಬಾಗಿಲು ತೆರೆದು ಹೊರಗೆ ಓಡಿದ. ಅಲ್ಲಿ ತನ್ನ ಮಿತ್ರ ಸೂರಿ ನಿಂತಿದ್ದನ್ನು ಕಂಡು ದೇಶಾವರಿ ನಗೆ ಬೀರುತ್ತ ಒಳಕ್ಕೆ ಕರೆದ. ವಾಸ್ತವದಲ್ಲಿ ವಿಭಾಳಿಗೆ ಕನ್ನಡದ 'ಯಾರೋ' ಎನ್ನುವ ಪದ ಬಾಯಿಗೆ ಬರಲಿಲ್ಲ. ಆ ಪದದ ಬದಲು ತನ್ನ ಮಾತೃಭಾಷೆಯ 'ಕೋಣ' ಪದವನ್ನು ಸೇರಿಸಿದ್ದಳು. ಶೀನಿ ಅದನ್ನು ಕನ್ನಡದ 'ಕೋಣ' ಎಂದು ಭಾವಿಸಿದ್ದ.

**ಅರವಿಂದ ಜಿ. ಜೋಷಿ**



## ವಿಗ್ರಹ ಮಾಡು...

ಗುಂಡನ ಮುಂದೆ ಗಣಪತಿ ದೇವ ಪ್ರತ್ಯಕ್ಷನಾಗಿ ಏನು ವರ ಬೇಕು ಎಂದು ಕೇಳಿದ. ಗುಂಡ, 'ನನ್ನನ್ನು ಒಂದು ಗಣಪತಿ ವಿಗ್ರಹವನ್ನಾಗಿ ಮಾಡು. ನನ್ನ ಹೆಂಡತಿ ಗಣಪತಿಯ ಮುಂದೆ ಬಗೆಬಗೆಯ ತಿಂಡಿಗಳನ್ನು ಮಾಡಿ ತಂದಿಡುತ್ತಾಳೆ. ಬೇಕಾದಷ್ಟು ತಿನ್ನಬಹುದು' ಎಂದ. ದೇವರು ಗುಂಡನ ಹೆಂಡತಿಯನ್ನು ಕರೆದು, 'ಈ ಕೋರಿಕೆಯನ್ನು ನೆರವೇರಿಸಬಹುದೆ?' ಎಂದು ಕೇಳಿದ. ಅವಳು ಸಂತೋಷದಿಂದ ಒಪ್ಪಿದಳು. ಗಣಪ, 'ಏನಮ್ಮಾ, ಗಂಡ ವಿಗ್ರಹವಾದರೆ ನಿನಗೆ ಬೇಸರವಿಲ್ಲವೆ?' ಎಂದು ಕೇಳಿದ. 'ಇಲ್ಲ, ಈ ಗಂಡನನ್ನು ಕೆರೆಗೆ ಹಾಕಿ, ವರ್ಷವರ್ಷವೂ ಹೊಸ ಗಂಡನನ್ನು ತಂದಿಡಬಹುದಲ್ಲವೆ?' ಎಂದಳು.

**ಪ. ರಾಮಕೃಷ್ಣ ಶಾಸ್ತ್ರಿ**